


S.J.M.V.B.A.J.S.S.
ARTS & COMMERCE COLLEGE
FOR WOMEN
Re-ACCREDITED AT THE

**ಎಸ್.ಜೆ.ಎಂ.ವಿದ್ಯಾಪೀಠ (ರಿ) ಚಿತ್ರದುರ್ಗ**

# ಎಸ್.ಜೆ.ಎಂ.ವ್ಹಿ. ಬಿ.ಎ.ಜೆ.ಎಸ್.ಎಸ್.ಮಹಿಳಾ ಮಹಾವಿದ್ಯಾಲಯ, ರಾಣೇಬೆನ್ನೂರು

**ನ್ಯಾಕ್ 'ಎ' ಗ್ರೇಡ್ ಮಾನ್ಯತೆ ಪಡೆದ**

---

ಸಂಖ್ಯೆ: ಎಸ್.ಜೆ.ಎಂ.ವ್ಹಿ/ /2017–18 ದಿನಾಂಕ: 21–09–2017

ಗೆ ಪ್ರಕಟಣೆಯ ಕೃಪೆಗಾಗಿ

ಸಂಪಾದಕರು/ವರದಿಗಾರರು,

____________________ ಕನ್ನಡ ದಿನಪತ್ರಿಕೆ

ರಾಣೇಬೆನ್ನೂರು–581 115

ಮಾನ್ಯರೆ, ***"ಜಾನಪದ" ಅನರಕ್ಷರಸ್ಥ ಸಮುದಾಯದ ಬಾಯಿಂದ ಬಾಯಿಗೆ ಹರಿದು ಬಂದಂತಹ ಒಂದು ಅಮೂಲ್ಯವಾದ ಸಾಹಿತ್ಯ ಪ್ರಕಾರವಾಗಿದೆ" ಪ್ರೊ.ಕಾಂತೇಶರಡ್ಡಿ ಆರ್ ಗೋಡಿಹಾಳ***

ದಿನಾಂಕ: 21–09–2017 ರಂದು ಸ್ಥಳೀಯ ಎಸ್.ಜೆ.ಎಂ.ವ್ಹಿ.ಮಹಿಳಾ ಮಹಾವಿದ್ಯಾಲಯದಲ್ಲಿ ಕನ್ನಡ ಸಾಂಸ್ಕೃತಿಕ ವೇದಿಕೆಯಿಂದ ಜಾನಪದಗೀತೆ ಸ್ಪರ್ಧೆ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡುತ್ತ ಶ್ರೀ ಕಾಂತೇಶರಡ್ಡಿ ಆರ್ ಗೋಡಿಹಾಳ, ಅಧ್ಯಕ್ಷರು, ಕನ್ನಡ ಜಾನಪದ ಪರಿಷತ್ತು ತಾಲ್ಲೂಕು ಘಟಕ ರಾಣೇಬೆನ್ನೂರು ಇವರು "ಜಾನಪದ ಸಾಹಿತ್ಯದ ಅಳಿವು ಉಳಿವು" ಕುರಿತು ಜಾನಪದ ಅನರಕ್ಷರಸ್ಥ ಸಮುದಾಯದ ಬಾಯಿಂದ ಬಾಯಿಗೆ ಹರಿದು ಬಂದಂತಹ ಒಂದು ಅಮೂಲ್ಯವಾದ ಸಾಹಿತ್ಯ ಪ್ರಕಾರವಾಗಿದೆ. ಇಂತಹ ಅಮೂಲ್ಯ ಸಾಹಿತ್ಯವು ಟಿ.ವಿ. ದಾರಾವಾಹಿಗಳ ಭರಾಟೆಯಲ್ಲಿ ಸೊರಗುತ್ತಿರುವುದು ವಿಷಾದನೀಯ. ಕಾಲೇಜುಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಏರ್ಪಡಿಸುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಜಾನಪದ ಸಾಹಿತ್ಯದ ಮಹತ್ವವನ್ನು ತಿಳಿಸುತ್ತಿರುವುದು ಪ್ರಶಂಶನೀಯ ಎಂದು ನುಡಿದರು. ***ಆಡಿ ಬಾ ನನ ಕಂದ ಅಂಗಾಲ ತೊಳೆದೇನ, ತೆಂಗಿನ ಕಾಯಿ ತಿಳಿನೀರ ತಕ್ಕೊಂಡು ಬಂಗಾರದ ಮೋರೆ ತೊಳೆದೇನ*** ಎಂದು ಹೇಳಿ ಮಕ್ಕಳ ಮಹತ್ವವನ್ನು ಕುರಿತು ಜಾನಪದ ತಾಯಂದಿರ ಅಂತರಾಳದ ನಿಲುವನ್ನು, ಮಕ್ಕಳೇ ದೇವರು ಎಂಬ ಮಹತ್ವದ ಅಂಶಗಳನ್ನು ತಿಳಿಸಿದರು. ಬೆಳಗಾನ ಎದ್ದು ಯಾರ್ಯಾರ ನೆನೆಯಲಿ ಎಳ್ಳು ಜೀರಿಗೆ ಬೆಳೆಯೋಳ ಭೂಮಿತಾಯಿ ಎದ್ದೊಂದು ಗಳಿಗೆ ನೆನೆದೇನ ಎಂದು ಹೇಳಿ **'ಜನನೀ ಜನ್ಮಭೂಮಿ ಸ್ವರ್ಗಾದಪಿ ಗರಿಯಸಿ'** ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು. ಬೆಳಿಗ್ಗೆ ಸೂರ್ಯೋದಯವಾಗುವ ಮುಂಚೆಯೇ ಎದ್ದು ಭೂಮಿತಾಯಿಯನ್ನು ಸ್ಮರಿಸುತ್ತ ಜನಪದಿಗರು ತಮ್ಮ ಬದುಕನ್ನು ಸಾಗಿಸುತ್ತಿದ್ದರು. ಮತ್ತೋರ್ವ ಮುಖ್ಯ ಅತಿಥಿಗಳಾಗಿ ಬಂದಂತ ಶ್ರೀ ಶ್ರೀನಿವಾಸ ನಲವಾಗಲ, ಕನ್ನಡ ಪ್ರಾಧ್ಯಾಪಕರು ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾವೇರಿ, ಇವರು ಜಾನಪದದ ಸ್ವರೂಪ ಕುರಿತು ಜೀವನವೊಂದು ಕಲೆ ಅದು ಎಲ್ಲಾ ಕಲೆಗಳಿಗಿಂತಲೂ ಹಿರಿದಾದುದು ಎಂದು ಹೇಳಿ ಜಾನಪದ ಸಂಸ್ಕೃತಿಯನ್ನು ಉಳಿಸುವಲ್ಲಿ ತಮ್ಮೆಲ್ಲರ ಸಹಕಾರ ತುಂಬಾ ಮುಖ್ಯ ಜಾಗತಿಕ ಮಟ್ಟದಲ್ಲಿ ಏಕೈಕ ಜಾನಪದ ವಿಶ್ವವಿದ್ಯಾನಿಲಯ ಇರುವುದು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಗೊಟಗೋಡಿಯಲ್ಲಿ ಎಂದು ಹೇಳಿ ವಿಶ್ವವಿದ್ಯಾಲಯದ ಸದುಪಯೋಗವನ್ನು ಪಡೆಯಿರೆಂದರು.

ಬಿ.ಎ.3ನೇ ಸೆಮಿಸ್ಟರ್‌ನ ವಿದ್ಯಾರ್ಥಿನಿ ಹಾಗೂ ಯುವಕವಿಯತ್ರಿ 'ಕರ್ನಾಟಕ ಸಾಹಿತ್ಯ ಸೇವಾಸಿರಿ ಪ್ರಶಸ್ತಿ' ಪುರಷ್ಕೃತಳಾದ ಕು.ಉಮಾರಾಣಿ ಎ ಪೂಜಾರ, ಇವರನ್ನು ಸನ್ಮಾನಿಸಲಾಯಿತು. ಇವರು ಮಾತನಾಡುತ್ತ ಸಾಹಿತ್ಯ ಲೋಕ ಸೊರಗುತ್ತಿರುವ ಇಂದಿನ ದಿನಗಳಲ್ಲಿ ಒಳ್ಳೆಯ ಕಾವ್ಯಗಳನ್ನು ಬರೆದು ನಾಡಿಗೆ ಸಮರ್ಪಿಸುವಲ್ಲಿ ಯುವ ಪ್ರತಿಭೆಗಳ ಪಾತ್ರ ತುಂಬಾ ಮುಖ್ಯ ವಾದುದು ಎಂದರು.

ಜಾನಪದಗೀತೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಕು.ಪೂಜಾ ಚೆನ್ನಗೌಡರ, ಬಿ.ಕಾಂ.1ನೇ ಸೆಮ್, ದ್ವಿತೀಯ ಸ್ಥಾನವನ್ನು ಕು.ಸಂಗೀತಾ ಕೆ.ಲಮಾಣಿ, ಬಿ.ಎ.5ನೇಸೆಮ್, ತೃತೀಯ ಸ್ಥಾನವನ್ನು ಕು.ಅನ್ನಪೂರ್ಣ ಕಿವುಡಣ್ಣನವರ, ಬಿ.ಕಾಂ.3ನೇ ಸೆಮ್, ಪಡೆದುಕೊಂಡರು. ಪ್ರೊ.ಡಿ.ಹೆಚ್.ಹರೀಶ್, ಪ್ರೊ.ಎಂ.ರಘುಪತಿ, ಪ್ರೊ.ಶ್ರೀನಿವಾಸ ನಲವಾಗಲ, ಇವರು ನಿರ್ಣಾಯಕರಾಗಿ ಆಗಮಿಸಿದ್ದರು. ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯರಾದ ಪ್ರೊ.ಎಸ್.ಎಂ.ಜಿಡ್ಡಿಯವರು ತಮ್ಮ ಅಧ್ಯಕ್ಷೀಯ ನುಡಿಯಲ್ಲಿ " ವಿದ್ಯಾರ್ಥಿನಿಯರು ಓದಿನ ಜೊತೆಗೆ ನೈತಿಕತೆಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು, ಇಂತಹ ಕನ್ನಡ ಸಾಂಸ್ಕೃತಿಕ ವೇದಿಕೆಯನ್ನು ಬಳಸಿಕೊಂಡು ಎಲ್ಲಾ ವಿದ್ಯಾರ್ಥಿನಿಯರು ತಮ್ಮಲ್ಲಿ ಹುದುಗಿರುವ ಸೂಪ್ತ ಪ್ರತಿಭೆಗಳನ್ನು ಹೊರಹೊಮ್ಮಿಸಬೇಕು. ಆಧುನಿಕ ಬದುಕಿನ ಒತ್ತಡವನ್ನು ನಿವಾರಿಸುವ ಶಕ್ತಿ ಜಾನಪದ ಹಾಡುಗಳಲ್ಲಿದೆ. ಸಾಹಿತ್ಯಲೋಕ ಬಡವಾಗುತ್ತಿದೆ, ಜೀವನವೊಂದು ಕಲೆ, ಅದು ಎಲ್ಲಾ ಕಲೆಗಳಿಗಿಂತಲೂ ಹಿರಿದಾದುದು ಎಂಬುದನ್ನು ಅರ್ಥೈಸಿಕೊಂಡು ಭಾವೈಕ್ಯತೆಯ ಬಾಳನ್ನು ಬೆಳಗಿಸಬೇಕೆಂದು ಶುಭ ಹಾರೈಸಿದರು.

ಪ್ರಾಸ್ತಾವಿಕ ನುಡಿಗಳನ್ನು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಕೆ.ಜಿ.ಚವಾಣ, ಕನ್ನಡ ಸಾಹಿತ್ಯ ವೇದಿಕೆಯನ್ನು ಕುರಿತು ಉಪನ್ಯಾಸಕರಾದ ಮಾಲತೇಶ ಪೂಜಾರ, ನಾಡಗೀತೆಯನ್ನು ಕು.ಪೂಜಾ ಎಚ್. ಚೆನ್ನಗೌಡರ, ಸ್ವಾಗತ ಹಾಗೂ ಪುಷ್ಪಾರ್ಪಣೆಯನ್ನು ಕು.ಇಸ್ರತ್‌ಜಬೀನ ಮುಜಾವರ, ಹಚ್ಚೇವು ಕನ್ನಡದ ದೀಪ ಗೀತೆಯನ್ನು ಕು.ಭುವನೇಶ್ವರಿ ಪೂಜಾರ ಮತ್ತು ಸಂಗಡಿಗರು ವಂದನಾರ್ಪಣೆಯನ್ನು ಕು.ಮಮತಾ ಆರ್.ಓಲೇಕಾರ, ಕಾರ್ಯಕ್ರಮ ನಿರೂಪಣೆಯನ್ನು ಕು.ಲಕ್ಷ್ಮೀ ವೈ ಕೋಲಕಾರ, ನೆರವೇರಿಸಿದರು. ವೇದಿಕೆಯಲ್ಲಿ ಖಜಾಂಚಿ ಮಧು ಹಲಸೂರ, ಬೋಧಕ ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿನಿಯರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ವಂದನೆಗಳೊಂದಿಗೆ, ತಮ್ಮ ವಿಶ್ವಾಸಿ,

ಪ್ರಾಚಾರ್ಯರು